3. ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಅತಿಸಣ್ಣ, ಸಣ್ಣ ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ನೀಡಿರುವ ಪ್ರೋತ್ಸಾಹದ ವಿವರಗಳು ಕೆಳಗಿನಂತಿವೆ.

(ರೂ.ಲಕ್ಷಗಳಲ್ಲಿ)

ಕ್ರ.ಸ.	ಯೋಜನೆ ವಿವರ	2011–12		2012–13		2013–14	
		ಘಟಕಗಳ ಸಂಖ್ಯೆ	ಮೊಬಲಗು ಸಂಖ್ಯೆ	ಘಟಕಗಳ	ಮೊಬಲಗು	ಘಟಕಗಳ	ಮೊಬಲಗು
1	ಬಂಡವಾಳ ಹೂಡಿಕೆ ಸಹಾಯಧನ	6	15.04	8	417	2	12.95
2	ಮುದ್ರಾಂಕ ಶುಲ್ಕ ವಿನಾಯಿತಿ & ವಿನಾಯಿತಿ ದರ ನೋಂದಣಿ	46	–	37	–	35	–
3	ಪ್ರವೇಶ ತೆರಿಗೆ ವಿನಾಯಿತಿ	15	–	22	–	4	–
4	ಭೂ ಪರಿವರ್ತನಾ ಶುಲ್ಕ ಮರುಪಾವತಿ	1	0 123	–	–	–	–
5	ಎ.ಪಿ.ಎಂ ಸಿ.ಸೆಸ್ ಪ್ರಮಾಣ ಪತ್ರ	–	–	–	–	–	–

ಇ) ಕಳೆದ ಮೂರು ವರ್ಷ ಗಳಲ್ಲಿ 90.51 ಎಕರೆ ಭೂಮಿಯನ್ನು 25 ಕೈಗಾರಿಕೆಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಈ ಕೈಗಾರಿಕೆಗಳು ಉತ್ಪಾದನೆ ಪ್ರಾರಂಭಿಸಿದ ನಂತರ ಒಟ್ಟು 1828 ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತವೆ. ಇವುಗಳ ಪೈಕಿ ಈಗಾಗಲೇ 5 ಕೈಗಾರಿಕೆಗಳು ಉತ್ಪಾದನೆ ಪ್ರಾರಂಭಿಸಿದ್ದು, ರೂ. 338.29 ಕೋಟಿ ಬಂಡವಾಳ ಹೂಡಿ, 921 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿರುತ್ತವೆ. ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್ ಹಾಗೂ ನೀರು ಸರಬರಾಜು ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಯೋಜನಾ ಸೌಲಭ್ಯಗಳ ಅನುಷ್ಠಾನ

1127 (2068) ಶ್ರೀ ಬಾಲಕೃಷ್ಣ ಪಿ.ಎನ್. (ಶ್ರವಣಬೆಳಗೊಳ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಪಶುಸಂಗೋಪನಾ ಇಲಾಖೆ ಅನುಷ್ಠಾನಗೊಳಿಸುತ್ತಿರುವ ಯೋಜನಾ ಸೌಲಭ್ಯಗಳು ಹಾಗೂ ಮೂಲಭೂತ ಸೌಕರ್ಯಗಳಾವುವು; (ವಿವರ ನೀಡುವುದು)

ಆ) ಈ ಜಿಲ್ಲೆಗೆ ಮಂಜೂರಾದ ಪಶು ವೈದ್ಯರು ಮತ್ತು ಇತರ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

ಇ) ಈ ಜಿಲ್ಲೆಯಲ್ಲಿ ಜಾನುವಾರುಗಳಿಗೆ ಬರುವ ಸಾಂಕ್ರಾಮಿಕ ರೋಗಗಳ ನಿರ್ಬಂಧ ಹಾಗೂ ಜಾನುವಾರುಗಳ ವೈದ್ಯಕೀಯ ಸೇವೆಗೆ ಬೇಕಾಗುವ ಔಷಧಿಗಳು ಸೂಕ್ತ ಪ್ರಮಾಣದಲ್ಲಿ ಸರಬರಾಜುಗೊಳ್ಳುತ್ತಿವೆಯೇ; ಈ ಬಗ್ಗೆ ಸರ್ಕಾರದ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) :–

ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಪಶುಸಂಗೋಪನಾ ಇಲಾಖಾ ವತಿಯಿಂದ 2014–15ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನಾ ಸೌಲಭ್ಯಗಳು ಈ ಕೆಳಕಂಡಂತಿದೆ :–

(ರೂ.ಲಕ್ಷಗಳಲ್ಲಿ)

ಕ್ರಸ.	ಯೋಜನೆಗಳು	ನಿಗದಿ ಪಡಿಸಿದ ಅನುದಾನ
1	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	264.458
ಅ)	ಮೇವು ಕತ್ತರಿಸುವ ಯಂತ್ರಗಳಿಗೆ	21.76
ಆ)	ಮೇವಿನ ಬೀಜ ಕಿರುಮೊಟ್ಟಣಗಳಿಗೆ	34.72
ಇ)	ದ್ರವಸಾರಜನಕ ಸೈಲೋಗಾಗಿ	45.478
ಈ)	ಹಾಸನ ಜಿಲ್ಲೆಗೆ ಕೆ.ಎಂ.ಎಫ್ ಪಶು ಆಹಾರದ ಘಟಕ ಶೇಖರಣಾ ಸೈಲೋ ನಿರ್ಮಾಣ	162.50
2	ವಿಸ್ತರಣೆ ಮತ್ತು ತರಬೇತಿ	6,594
ಅ)	ಪಶುಪಾಲಕರ ಯಶೋಗಾಥೆ	0.20
ಆ)	ಪಶುವೈದ್ಯರು ಜಿಲ್ಲಾ ಮಟ್ಟದ ತಾಂತ್ರಿಕ ಕಾರ್ಯಗಾರ	0.20

ಇ)	ಅರೆ ತಾಂತ್ರಿಕ ಸಿಬ್ಬಂದಿಯವರಿಗೆ ಜಿಲ್ಲಾ ಮಟ್ಟದ ಕಾರ್ಯಗಾರ	0.20
ಈ)	ಮಿಶ್ರ ತಳಿ ಹಸು ಕರುಗಳ ಪ್ರದರ್ಶನ	1.60
ಉ)	ಕಿಸಾನ್ ಸಂಪರ್ಕ ಸಭೆ	0.14
ಊ)	ರೈತರ ತರಬೇತಿಗೆ ಪ್ರೋತ್ಸಾಹ ಧನ	2.25
ಋ)	ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರದ ಬಲವರ್ಧನೆ	2.00
3	ವಿಶೇಷ ಘಟಕ ಯೋಜನೆ – ಹೈನು ರಾಸುಗಳ ಘಟಕ (ಜಿಲ್ಲಾವಲಯ)	12.18
4	ವಿಶೇಷ ಘಟಕ ಯೋಜನೆ – ಹೈನು ರಾಸುಗಳ ಘಟಕ (ರಾಜ್ಯವಲಯ)	45.75
5	ಗಿರಿಜನ ಉಪ ಯೋಜನೆ – ಹೈನು ರಾಸುಗಳ ಘಟಕ (ಜಿಲ್ಲಾವಲಯ)	2.625
6	ಗಿರಿಜನ ಉಪ ಯೋಜನೆ – ಹೈನು ರಾಸುಗಳ ಘಟಕ (ರಾಜ್ಯ ವಲಯ)	4.50
7	ಗಿರಿರಾಜ ಕೋಳಿ ಸಾಕಾಣಿಕೆ	5.00
8	ಜಾನುವಾರು ಫಲೀಕರಣ ಶಿಬಿರ	3.55
9	ವಿಶೇಷ ಅಭಿವೃದ್ಧಿ ಯೋಜನೆ – (ಬಹುವಾರ್ಷಿಕ ಬೆಳೆ ಬೆಳೆಯಲು)	1.63
	ಒಟ್ಟು ಮೊತ್ತ	346.329

ಮೂಲಭೂತ ಸೌಕರ್ಯಗಳು :–

1. ಆರ್.ಐ.ಡಿ.ಎಫ್ 19ರ ಅಡಿಯಲ್ಲಿ ಹಾಸನ ಜಿಲ್ಲೆಯ 4 ತಾಲ್ಲೂಕುಗಳಲ್ಲಿನ 7 ಪಶುವೈದ್ಯಕೀಯ ಸಂಸ್ಥೆಗಳಿಗೆ ರೂ.173.60 ಲಕ್ಷಗಳ ಅನುದಾನ ನಿಗದಿ ಪಡಿಸಲಾಗಿದೆ.

2. E.S.V H.D ಯೋಜನೆ ಅಡಿ ಹಾಸನ ಜಿಲ್ಲೆಯ 4 ತಾಲ್ಲೂಕುಗಳಲ್ಲಿನ 4 ಪಶುವೈದ್ಯಕೀಯ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣ, ಪೀಠೋಪಕರಣ ಖರೀದಿಗಾಗಿ ರೂ.49.565 ಲಕ್ಷಗಳ ಅನುದಾನ ನಿಗದಿ ಪಡಿಸಲಾಗಿದೆ.

ಮೂಲಭೂತ ಸೌಕರ್ಯಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಾಸನ ಜಿಲ್ಲೆಗೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ :–

ಕ್ರ.ಸ.	ಹುದ್ದೆಯ ಪದನಾಮ	ಮಂಜೂರು	ಭರ್ತಿ	ಖಾಲಿ
1	ಉಪ ನಿರ್ದೇಶಕರು	2	2	0
2	ಉಪ ನಿರ್ದೇಶಕರು (ಪಾಲಿ ಕ್ಲಿನಿಕ್)	1	0	1
3	ಸಹಾಯಕ ನಿರ್ದೇಶಕರು	14	5	9
4	ಪಶುವೈದ್ಯಾಧಿಕಾರಿಗಳು	100	61	39
5	ಆಡಳಿತ ಸಹಾಯಕರು	1	0	1
6	ಜಾನುವಾರ ಅಧಿಕಾರಿ	10	10	0
7	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	113	87	26
8	ಪಶುವೈದ್ಯಕೀಯ ಪರೀಕ್ಷಕರು	81	69	12
9	ಪಶುವೈದ್ಯಕೀಯ ಸಹಾಯಕರು	115	90	25
10	ಅಧೀಕ್ಷಕರು	2	2	0
11	ಪ್ರಥಮ ದರ್ಜೆ ಸಹಾಯಕರು	6	5	1
12	ದ್ವಿತೀಯ ದರ್ಜೆ ಸಹಾಯಕರು	7	6	1
13	ಬೆರಳಚ್ಚುಗಾರರು	2	2	0
14	ವಾಹನ ಚಾಲಕರು	10	8	2
15	"ಡಿ" ದರ್ಜೆ ನೌಕರರು	323	162	161
	ಒಟ್ಟು	**787**	**509**	**278**

ಇ) ಜಿಲ್ಲೆಯಲ್ಲಿನ ಜಾನುವಾರುಗಳಲ್ಲಿ ಕಂಡು ಬರುವ ಸಾಂಕ್ರಾಮಿಕ ರೋಗಗಳ ವಿರುದ್ಧ ಅವಶ್ಯಕವಾದ ಲಸಿಕೆಗಳು ಲಭ್ಯವಿದ್ದು, ಮುಂಜಾಗ್ರತ ಕ್ರಮವಾಗಿ ಜಾನುವಾರುಗಳಿಗೆ ಸಾಂಕ್ರಾಮಿಕ ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮವನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದ್ದು, ಜಾನುವಾರುಗಳ ವೈದ್ಯಕೀಯ ಸೇವೆಗೆ ಅವಶ್ಯಕವಾಗುವ ಔಷಧಿಗಳನ್ನು 2014–15ನೇ ಸಾಲಿಗೆ ಜಿಲ್ಲಾ ವಲಯದ

ಅಡಿಯಲ್ಲಿ ರೂ.60.00 ಲಕ್ಷಗಳ ಅನುದಾನದಲ್ಲಿ ಔಷಧಿ ಮತ್ತು ರಾಸಾಯನಿಕ ಸರಬರಾಜು ಮಾಡಲಾಗಿರುತ್ತದೆ. ರಾಜ್ಯ ಫಲಯದ ಅನುದಾನದಲ್ಲಿ ಮೊದಲನೇ ಅರ್ಧವಾರ್ಷಿಕದ ಸರಬರಾಜು ಆದೇಶದಲ್ಲಿ ರೂ.54,28,194/– ಗಳ ಔಷಧಿ ಮತ್ತು ರಾಸಾಯನಿಕ ಸರಬರಾಜು ಮಾಡಲಾಗಿರುತ್ತದೆ. ಹಾಗೂ ಎರಡನೇ ಆರ್ಥಿಕ ವರ್ಷದಲ್ಲಿ ರೂ.43,28,482/ ಗಳ ಔಷಧಿ ಮತ್ತು ರಾಸಾಯನಿಕಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೋಳ) ಇವರ ಚುಕ್ಕೆ ಗುರುತಿಲ್ಲದ

ಪ್ರಶ್ನೆ ಸಂಖ್ಯೆ: 2068 ಕ್ಕೆ ಅನುಬಂಧ

1. ಹಾಸನ ಜಿಲ್ಲೆಗೆ ಆರ್.ಐ.ಡಿ.ಎಫ್ 19ರ ಅಡಿಯಲ್ಲಿ ನಿಗದಿ ಪಡಿಸಿದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	ಪಶುವೈದ್ಯಕೀಯ ಸಂಸ್ಥೆ	ನಿಗದಿ ಪಡಿಸಿದ ಮೊತ್ತ
1	ಅರಕಲಗೂಡು	ಪಶುಚಿಕಿತ್ಸಾಲಯ, ಬೈಚಲನಹಳ್ಳಿ	24.80
2	ಅರಸೀಕೆರೆ	ಕೃ.ಗ.ಕೇ. ನೇರ್ಲಿಗೆ	24.80
		ಪ್ರಾ.ಪ.ಕೇ. ಕೋಲಗುಂದ	24.80
3	ಚನ್ನರಾಯಪಟ್ಟಣ	ಪ.ಜಿ. ಬಾಗೂರು	24.80
4	ಹಾಸನ	ಪ್ರಾ.ಪ.ಚಿ. ಕಂಚನಹಳ್ಳಿ	24.80
		ಕೃ.ಗ.ಕೇ. ಯಲಗುಂದ	24.80
		ಪ್ರಾ.ಪ.ಚಿ. ಉಗನೆ	24.80
	ಒಟ್ಟು		**173.60**

2 ಹಾಸನ ಜಿಲ್ಲೆಗೆ E.S.V.H.D. ಅಡಿಯಲ್ಲಿ ನಿಗದಿ ಪಡಿಸಿದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	ಪಶುವ್ಯದ್ಯಕೀಯ ಸಂಸ್ಥೆ	ನಿಗದಿ ಪಡಿಸಿದ ಮೊತ್ತ		ಒಟ್ಟು
			ಕಟ್ಟಡ ನಿರ್ಮಾಣ	ಪೀಠೋಪಕರಣ ಖರೀದಿಸುವ ಮೊತ್ತ	
1	ಚನ್ನರಾಯಪಟ್ಟಣ	ಪ.ಆ. ಶ್ರವಣಬೆಳಗೊಳ	13.4	1.5	14.9
2	ಅರಕಲಗೂಡು	ಪಶುಚಿಕಿತ್ಸಾಲಯ, ಮಲ್ಲಿಪಟ್ಟಣ	10.6	0.955	11.555
3	ಅರಸೀಕೆರೆ	ಪಶುಚಿಕಿತ್ಸಾಲಯ, ಬೆಳಗುಂಬ	10.6	0.955	11.555
4	ಆಲೂರು	ಪ.ಚಿ, ರಾಯರಕೊಪ್ಪಲು	10.6	0.955	11.555
	ಒಟ್ಟು		**45.2**	**4.365**	**49.565**

ಒಳಚರಂಡಿ ಕಾಮಗಾರಿಗಳು

1128 (878) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಮಾಗಡಿ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಒಳಚರಂಡಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು; ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ;

ಇ) ಈ ಕಾಮಗಾರಿಗೆ ಮಂಜೂರಾಗಿರುವ ಹಣವೆಷ್ಟು; ಈವರೆವಿಗೆ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ; ಎಷ್ಟು ಹಣ ಖರ್ಚಾಗಿದೆ ;

ಈ) ಕಾಮಗಾರಿಗಳೂ ಪೂರ್ಣಗೊಳ್ಳದಿರಲು ಕಾರಣವೇನು ; ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?